**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.**

| ಸಿ.ಸಿ.ನಂ. 3773/2021 | | | |
|---|---|---|---|
| ಸಾಕ್ಷಿದಾರರ ಹೆಸರು | ವಿಜಯೇಂದ್ರ ರಾವ್ | | |
| ತಂದೆ:ಹೆಸರು | ದೇವದಾಸ್ ರಾವ್ | ಪಿಡಬ್ಲೂ: | 5 |
| ವಯಸ್ಸು: | 65 ವರ್ಷ | ಸಿಡಬ್ಲೂ: | 5 |
| ಉದ್ಯೋಗ: | ನಿವೃತ ಎಸ್ ಬಿ ಐ ವ್ಯವಸ್ಥಾಪಕರು | | |
| ವಾಸ ಸ್ಥಳ: | ಉಡುಪಿ | | |

**ದಿನಾಂಕ: 26-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ ಸ ಅ ರವರಿಂದ:-**

16.05.2011 ರಿಂದ ಸೆಪ್ಟೆಂಬರ್ 2014 ರವರೆಗೆ ಎಸ್ ಬಿ ಎಂ ಚಿಂತಾಮಣಿ ಶಾಖೆಯ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆರೋಪಿಯಾದ ಕರ್ನಾಟಕದ ಬೀಜ ನಿಗಮದ ಕಿರಿಯ ಸಹಾಯಕಾರಾದ ಶ್ರೀ ವೆಂಕಟೇಶ ರವರು ನಮ್ಮ ಬ್ಯಾಂಕಿನ ನಕಲಿ ಸ್ಟೇಟ್ ಮೆಂಟ್ ಅನ್ನು ಸೃಷ್ಟಿಸಿ ಹಾಗೂ ನಕಲಿ ಬ್ಯಾಂಕ್ ಸೀಲ್ ಅನ್ನು ತಯಾರಿಸಿ ನಿಗಮದ ಹಣವನ್ನು ದುರುಪಯೋಗ ಪಡಿಸುವ ಆರೋಪ ಹೊಂದಿದ್ದು ಸಿ ಓಡಿ ಅಧಿಕಾರಿಗಳು 19.06.2012 ರಂದು ನಮ್ಮ ಬ್ಯಾಂಕಿನ ಸೀಲನ್ನು ವಿಧಿ ವಿಜ್ಞಾನ ತಜ್ಞರಿಗೆ ಕಳುಹಿಸಲು ನಮ್ಮಿಂದ ಪಡೆದಿರುತ್ತಾರೆ. ಇದಕ್ಕೆ ನಾವು ಹಿರಿಯ ಅಧಿಕಾರಿಗಳಿಂದ ಅನುಮತಿಯನ್ನು ಪಡೆದಿರುತ್ತೇನೆ.

**ಪಾಟೀಸವಾಲು: ಶ್ರೀ.ಬಿ.ಆರ್.ಎಸ್. 5 ನೇ ಆರೋಪಿ ಪರ ವಕೀಲರಿಂದ:-**

ನಿಮ್ಮ ಬ್ಯಾಂಕಿನಲ್ಲಿ ನಿಮ್ಮ ಕಚೇರೀಯ ಸೀಲ್ ಯಾವ ದಿನಾಂಕದಿಂದ ಎಂದು ದಾಖಲೆ ಇರುತ್ತದೆಯಾ ಎಂದರೆ ಇಲ್ಲ. ನಿಮ್ಮ ಬ್ಯಾಂಕಿನಲ್ಲಿರುವ ಬೇರೆ ಯಾರು ಮಾಡಿಸಬಹುದು ಎಂದರೆ ಹೌದು. ನಿಮ್ಮ ಬ್ಯಾಂಕ್ ಮತ್ತು ಬೇರೆ ಸಿಲ್ ಗಳು ವ್ಯತ್ಯಾಸ ಗೊತ್ತಾಗುವುದಿಲ್ಲ ಎಂದರೆ ಹೌದು. ಬ್ಯಾಂಕ್ ಅಕೌಂಟ್ ರಸೀದಿಯಲ್ಲಿ ಒಂದೇ ಸೀಲ್ ಇರುತ್ತದೆ ಎಂದು ಹೇಳಲು ಬರುವುದಿಲ್ಲ ಎಂದರೆ ಇಲ್ಲ. ನೀವು ರಸೀದಿಗಳ ಡಿಸ್ಪುಟೆಡ್ ಸೀಲ್ ಗಳು ನಿಮಗೆ ಯಾರು ಮಾಡಿಸಿದ ಸೀಲ್ ಎಂದು ಹೇಳಲು ಬರುವುದಿಲ್ಲ ಎಂದರೆ ಇಲ್ಲ. ರಸೀದಿಗಳಲ್ಲಿ ಪ್ರತ್ಯೇಕವಾಗಿ ನಂಬರ್ ಗಳನ್ನು ಕೊಡುತ್ತಾರೆ ಅದನ್ನು ನಿಮ್ಮ ರಿಜಿಸ್ಟರ್ ಗಳಲ್ಲಿ ನಮೂದು ಮಾಡುತ್ತಾರೆ ಎಂದರೆ ಹೌದು. ನೀವು ಸದರಿ ರಿಜಿಸ್ಟರ್ ಗಳನ್ನು ಪರಿಶೀಲನೆ ಮಾಡಿಲ್ಲ ಎಂದರೆ ಇಲ್ಲ. ಪೊಲಿಸರು ನಿಮ್ಮ ಬಳಿ ಬಂದಿರುವುದಿಲ್ಲ ನೀವು ಯಾವುದೇ ಸೀಲ್ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**5 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲನ್ನು 1 ಮತ್ತು 2 ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**Sd/-**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.